## ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ. ಎ. ತಿಪ್ಪೆಸ್ವಾಮಿ ಇವರು ಭಾರತ ಸರ್ಕಾರ ಆಹಾರ ಕಲಬೆರಕೆ ನಿಯಂತ್ರಣ ಮತ್ತು ಸುರಕ್ಷತೆಗೆ ಸಂಬಂಧಿಸಿದ ಏಳು ಕೇಂದ್ರ ಕಾಯ್ದೆ ನಿಯಂತ್ರಣಗಳನ್ನು ನಿರಸನಗೊಳಿಸಿ ದೇಶಾದ್ಯಂತ ಏಕ ರೂಪ ಆಹಾರ ಸುರಕ್ಷತೆ ಸಲುವಾಗಿ ಆಹಾರ ಸುರಕ್ಷತೆ ಮತ್ತು ಮಾನದಂಡ ಕಾಯ್ದೆ, 2006 ಅಂದರೆ **Food Safety and Standard Act – 2006** ಅನ್ನು ಜಾರಿಗೆ ತಂದಿದೆ ಮತ್ತು ದೇಶದಲ್ಲಿನ ಆಹಾರ ಉತ್ಪನ್ನ, ಶೇಖರಣೆ, ವಿತರಣೆ, ಮಾರಾಟ ಮತ್ತು ಆಮದು ಬಗ್ಗೆ ವೈಜ್ಞಾನಿಕವಾದ ಮಾನದಂಡಗಳು ಮತ್ತು ನಿಯಂತ್ರಣಕ್ಕೆ ಭಾರತೀಯ ಆಹಾರ ಸುರಕ್ಷತೆ ಮತ್ತು ಮಾನದಂಡ ಪ್ರಾಧಿಕಾರವನ್ನು Food Safety and Standards Authority of India – FSSAI ಸ್ಥಾಪಿಸಿದೆ.

ಅದರಲ್ಲಿ ರಾಜ್ಯ ಸರ್ಕಾರ ರಚಿಸಿರುವ ರಾಜ್ಯ ಆಹಾರ ಸುರಕ್ಷತಾ ಆಯುಕ್ತರು– **State food Safety Commissioner** ಇವರು ಈ ಕಾಯ್ದೆಯನ್ನು ಜಾರಿಗೊಳಿಸುವುದಲ್ಲದೇ ಈ ಕಾಯ್ದೆ ಅಡಿಯಲ್ಲಿ ಕೈಗೊಳ್ಳುವ ಆಹಾರ ವಹಿವಾಟುಗಳನ್ನು ಪರಿಶೀಲಿಸಿ, ಉಸ್ತುವಾರಿ ವಹಿಸುವುದಲ್ಲದೇ, ಆಹಾರ ಸುರಕ್ಷತೆಗೆ ಉಂಟಾಗುವ ತೊಡಕು ಮತ್ತು ಕಲಬೆರಕೆಯನ್ನು ತಡೆಗಟ್ಟುವುದಲ್ಲದೇ ಸಕಾಲದಲ್ಲಿ ಸರಿಯಾದ ಕ್ರಮವಹಿಸಬೇಕಾಗಿದೆ.

ಆದರೆ, ಕಾಯ್ದೆ ಜಾರಿಗೆ ಬಂದು ಸುಮಾರು ಒಂದುವರೆ ದಶಕಗಳು ಕಳೆದರೂ ರಾಜ್ಯದಲ್ಲಿನ ಆಹಾರ ಸುರಕ್ಷತಾ ಆಯುಕ್ತರು, ರಾಜ್ಯದಲ್ಲಿ ನಡೆಯುವ ಕಲಬೆರಕೆಯನ್ನು ತಡೆಗಟ್ಟುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಅದರಲ್ಲೂ, ಪಟ್ಟಣ ಮತ್ತು ನಗರ ಪ್ರದೇಶದಲ್ಲಿರುವ 5 ನಕ್ಷತ್ರದ ಹೋಟೆಲ್‌ನಿಂದ ಹಿಡಿದು ದರ್ಶಿನಿ ಹೋಟೆಲ್‌ಗಳಲ್ಲಿ ತಯಾರಿಸುವ ಆಹಾರ ಸುರಕ್ಷತೆ ಬಗ್ಗೆ ಯಾವುದೇ ರೀತಿಯ ನಿಗಾ ಇರುವುದಿಲ್ಲ. ಈ ಬಗ್ಗೆ ಮೈಸೂರಿನಲ್ಲಿ ನಡೆದಿರುವ ಪ್ರಕರಣದ ಬಗ್ಗೆ ಸಾಕಷ್ಟು ದಿನ ಪತ್ರಿಕೆಗಳಲ್ಲಿ ವರದಿಯಾಗಿದೆ.

ಅದೇ ರೀತಿ ರಾಜ್ಯದ ಮಂಡ್ಯ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ತಯಾರಾಗುವ ಬೆಲ್ಲವು ಗುಜರಾತ್, ರಾಜಸ್ತಾನ, ಅಸ್ಸಾಂ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿ ಹಲವು ದಶಕಗಳಿಂದ ಬೇಡಿಕೆಯಿದ್ದು, ಇತ್ತೀಚಿನ ದಿನಗಳಲ್ಲಿ ರಾಸಾಯನಿಕ ವಸ್ತುಗಳ ಮತ್ತು ಸಕ್ಕರೆ ಮಿಶ್ರಣದಿಂದ ಕಲಬೆರಕೆಯಾಗಿ, ಈ ಮೇಲ್ಕಂಡ ರಾಜ್ಯಗಳು ಕಲಬೆರಕೆ ಬೆಲ್ಲವನ್ನು ಕೊಳ್ಳಲು ತಿರಸ್ಕಾರ ಮಾಡಿರುವುದು ದಿನ ಪತ್ರಿಕೆಗಳಲ್ಲಿ ವರದಿಯಾಗಿದೆ ಎಂಬ ವಿಷಯದ ಕುರಿತು ನಿಯಮ–72ರಡಿ ಗಮನ ಸೆಳೆದಿರುತ್ತಾರೆ.

* * *

ಉತ್ತರ.

ಕರ್ನಾಟಕವು ಸೇರಿದಂತೆ ದೇಶಾದ್ಯಂತ ಏಕರೂಪ ಆಹಾರ ಸುರಕ್ಷತೆಗಾಗಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 (Food Safety and Standard Act – 2006) ಅನ್ನು 2006 ನೇ ಇಸವಿಯಲ್ಲಿ ಜಾರಿಗೊಳಿಸಿದೆ. ಸದರಿ ಕಾಯ್ದೆಯನ್ನು ರಾಜ್ಯದಲ್ಲಿ 2012ನೇ ಸಾಲಿನಿಂದ ಆಹಾರ ಸುರಕ್ಷತಾ ಆಯುಕ್ತಾಲಯವನ್ನು ಸೃಜಿಸುವ ಮೂಲಕ ಅನುಷ್ಠಾನಗೊಳಿಸಲಾಗಿದೆ.

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯು ರಾಜ್ಯದಲ್ಲಿರುವ ನಾಗರಿಕರಿಗೆ ಉತ್ತಮ ಗುಣಮಟ್ಟದ ಹಾಗೂ ಆರೋಗ್ಯವಾದ ಆಹಾರ ದೊರಕುವಂತೆ ಮಾಡಲು ಕಾರ್ಯನಿರ್ವಹಿಸುತ್ತಿದೆ. ಜೊತೆಗೆ ರಾಜ್ಯದಲ್ಲಿರುವ ಆಹಾರ ಉದ್ದಿಮೆದಾರರು (ಹೋಟೆಲ್, ರೆಸ್ಟೋರೆಂಟ್, ಆಹಾರ ತಯಾರಿಕಾ ಘಟಕಗಳು, ಸಂಗ್ರಹಣಾ ಘಟಕಗಳು, ಶೀಥಲೀಕರಣ ಘಟಕಗಳು, ಬೀದಿಬದಿ ಆಹಾರ ವ್ಯಾಪಾರಸ್ಥರು, ಮಾಂಸದ ಅಂಗಡಿಗಳು ಹಾಗೂ ವಿತರಣಾ ಘಟಕಗಳು ಇತ್ಯಾದಿ) ಆಹಾರ ನೊಂದಣಿ/ಪರವಾನಗಿಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಈ ಎಲ್ಲಾ ಉದ್ದಿಮೆಗಳನ್ನು ಆಹಾರ ನೊಂದಣಿ/ಪರವಾನಗಿಯಡಿಯಲ್ಲಿ ತರಲು ಆಯುಕ್ತಾಲಯವು ಶ್ರಮಿಸುತ್ತಿದೆ.

ಆಹಾರ ಸುರಕ್ಷತೆ ಮತ್ತು ಮಾನದಂಡ ಕಾಯಿದೆ ಮತ್ತು ಇದಕ್ಕೆ ಸಂಬಂಧಿಸಿದ ಕಾಯಿದೆಗಳನ್ನು ಜಾರಿ ಅನುಷ್ಠಾನ ನಿರ್ವಹಣೆ ಮತ್ತು ಮೇಲುಸ್ತುವಾರಿ ಅಥವಾ ನಿಗಾ ವಹಿಸಲು ಕಾಲಕಾಲಕ್ಕೆ ಕೇಂದ್ರ **FSSAI** ನವದೆಹಲಿ ರವರು ಹೊರಡಿಸುವ ಅಧಿಸೂಚನೆ/ಸುತ್ತೋಲೆ ಹಾಗೂ ಮಾರ್ಗಸೂಚಿಗಳನ್ವಯ ಆಹಾರ ಸುರಕ್ಷತೆ ಕಾಯ್ದೆಯನ್ನು ಯಶಸ್ವಿಯಾಗಿ ಜಾರಿಗೊಳಿಸಲು ಎಲ್ಲಾ ಜಿಲ್ಲೆಗಳ ಹಾಗೂ ತಾಲ್ಲೂಕುಗಳ ಆಹಾರ ಸುರಕ್ಷತಾಧಿಕಾರಿಗಳು ಮತ್ತು ಅಂಕಿತಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಆರೋಗ್ಯ ಇಲಾಖೆಯು ರಾಜ್ಯದಲ್ಲಿ ಆಹಾರ ಕಲಬೆರಕೆಯನ್ನು ತಡೆಗಟ್ಟುವ ಹಿನ್ನಲೆಯಲ್ಲಿ 2020-21ನೇ ಸಾಲಿನಲ್ಲಿ **5,217** ಕಾನೂನಾತ್ಮಕ ಆಹಾರ ಮಾದರಿಗಳನ್ನು ಸಂಗ್ರಹಿಸಿ ಗುಣವಿಶ್ಲೇಷಣೆಗೆ ಒಳಪಡಿಸಿದಾಗ **77 unsafe, 101 Sub-standard** ಮತ್ತು **141 Mis-brand** ಪ್ರಕರಣಗಳು ವರದಿಯಾಗಿದ್ದು, 2021-22ನೇ ಆರ್ಥಿಕ ವರ್ಷದಲ್ಲಿ **2,406** ಮಾದರಿಗಳನ್ನು ಸಂಗ್ರಹಿಸಿ ಗುಣವಿಶ್ಲೇಷಣೆಗೆ ಒಳಪಡಿಸಿದಾಗ **8 unsafe, 28 Sub-standard** ಮತ್ತು **49 Mis-brand** ಪ್ರಕರಣಗಳನ್ನು ವರದಿ ಮಾಡಿದ್ದು, ಸದರಿಯವರ ವಿರುದ್ಧ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯಡಿ ಕ್ರಮ ವಹಿಸಲಾಗಿದೆ.

ರಾಜ್ಯದಲ್ಲಿ ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಒಟ್ಟು 4 ವಿಭಾಗೀಯ ಆಹಾರ ಪ್ರಯೋಗಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ಆಹಾರ ಪದಾರ್ಥಗಳ ಗುಣಮಟ್ಟವನ್ನು ವಿಶ್ಲೇಷಣೆ ಮಾಡಲಾಗುತ್ತಿದೆ. ಈ ಪ್ರಯೋಗಾಲಯಗಳಿಗೆ **NABL** ಗುಣಮಟ್ಟ ಪ್ರಮಾಣ ಪತ್ರವನ್ನು ಪಡೆಯುವ ಪ್ರಕ್ರಿಯೆ ಜಾರಿಯಲ್ಲಿದೆ. ಹಾಗೂ ಇದರೊಂದಿಗೆ ರಾಜ್ಯ ಸಂಚಾರಿ ಪ್ರಯೋಗಾಲಯಗಳ ಮೂಲಕ ರಾಜ್ಯದ ಜಿಲ್ಲೆ, ಗ್ರಾಮಗಳಲ್ಲಿ ಸಂಚರಿಸಿ ಆಹಾರ ಕಲಬೆರಕೆಯ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯದಲ್ಲಿ ನಿರತವಾಗಿದೆ. ಅಲ್ಲದೇ ಸದರಿ ಮಾದರಿಯ ಇನ್ನೂ ಮೂರು ಸಂಚಾರಿ ಪ್ರಯೋಗಾಲಯಗಳನ್ನು ಕೇಂದ್ರ ಸರ್ಕಾರದಿಂದ ಪಡೆದುಕೊಳ್ಳಲು ಕ್ರಮ ವಹಿಸಲಾಗಿದೆ.

ಕಳೆದ 3 ವರ್ಷಗಳಲ್ಲಿ **FSSAI** ಕಾಯಿದೆ ಉಲ್ಲಂಘಿಸಿದ ಆಹಾರ ಉದ್ದಿಮೆಗಳ ಮೇಲೆ ಅಪರ ಜಿಲ್ಲಾ ನ್ಯಾಯಾಲಯದಲ್ಲಿ 839 ಪ್ರಕರಣಗಳನ್ನು ದಾಖಲಿಸಲಾಗಿದೆ. 593 ಮೊಕದ್ದಮೆಗಳು ಇತ್ಯರ್ಥವಾಗಿದ್ದು, **37,25,950** ರೂಪಾಯಿಗಳ ದಂಡ ಸಂಗ್ರಹಿಸಲಾಗಿದೆ. ಹಾಗೂ ಜೆ.ಎಮ್.ಎಫ್.ಸಿ ನ್ಯಾಯಲಯದಲ್ಲಿ ಒಟ್ಟು **193** ಪ್ರಕರಣಗಳನ್ನು ದಾಖಲಿಸಲಾಗಿದೆ. **15** ಮೊಕದ್ದಮೆಗಳು ಇತ್ಯರ್ಥವಾಗಿದ್ದು, **1,55,000** ರೂಪಾಯಿಗಳ ದಂಡ ಸಂಗ್ರಹಿಸಲಾಗಿದೆ. **(ಅನುಬಂಧ-1).** ಉಳಿದ ಪ್ರಕರಣಗಳು ನ್ಯಾಯಾಲಯಗಳಲ್ಲಿ ವಿಚಾರಣೆಯಲ್ಲಿರುತ್ತವೆ.

ಹೋಟೆಲ್ ಉದ್ಯಮಕ್ಕೆ ಸಂಬಂಧಿಸಿದಂತೆ 5 ಸ್ಟಾರ್ ಹೋಟೆಲ್‌ಗಳಿಗೆ ಪರವಾನಿಗೆ ನೀಡುವುದು/ಪರಿಶೀಲನೆ ಮಾಡುವ ಅಧಿಕಾರ ಕೇಂದ್ರ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರಕ್ಕಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಹೋಟೆಲ್ ಉದ್ದಿಮೆದಾರರ ಸಂಘವು ರಾಜ್ಯ ಮತ್ತು ಕೇಂದ್ರ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರಗಳ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದು **(ಸಂಖ್ಯೆ W.P.25756/2012)** ಪ್ರಕರಣ ಉಚ್ಚ ನ್ಯಾಯಾಲಯದಲ್ಲಿರುವುದರಿಂದ ಹೋಟೆಲ್ ಉದ್ದಿಮೆದಾರರ ಮೇಲೆ ಕ್ರಮ ವಹಿಸುವುದು ಕ್ಲಿಷ್ಟಕರವಾಗಿರುತ್ತದೆ. ಸದರಿ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ.

..3.

ಅದೇ ರೀತಿ ರಾಜ್ಯದ ಮಂಡ್ಯ, ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ತಯಾರಾಗುವ ಬೆಲ್ಲವು ಗುಜರಾತ, ರಾಜಸ್ತಾನ, ಅಸ್ಸಾಂ ಮತ್ತು ಮದ್ಯಪ್ರದೇಶ ರಾಜ್ಯಗಳಲ್ಲಿ ಹಲವು ದಶಕಗಳಿಂದ ಬೇಡಿಕೆ ಇದ್ದು, ಇತ್ತೀಚಿನ ದಿನಗಳಲ್ಲಿ ರಾಸಾಯನಿಕ ವಸ್ತುಗಳ ಮತ್ತು ಸಕ್ಕರೆ ಮಿಶ್ರಣದಿಂದ ಕಲಬೆರಕೆಯಾಗಿ, ಈ ಮೇಲ್ಕಂಡ ರಾಜ್ಯಗಳು ಕಲಬೆರಿಕೆ ಬೆಲ್ಲವನ್ನು ಕೊಳ್ಳಲು ತಿರಸ್ಕಾರ ಮಾಡಿರುವುದು (ದಿನಪತ್ರಿಕೆಗಳಲ್ಲಿ) ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇವಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಬೆಲ್ಲ ತಯಾರಕರು ರೈತಾಪಿ ವರ್ಗದವರಾಗಿರುವುದರಿಂದ ಅವರ ಮೇಲೆ ನೇರವಾಗಿ ಮೊಕದ್ದಮೆಗಳು ಹಾಕುವುದರ ಬದಲಾಗಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಮೂಲಕ ಬೆಲ್ಲ ತಯಾರಕರ ಸಭೆಗಳನ್ನು ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ನಡೆಸಿ ಆಹಾರ ಕಲಬೆರಕೆ, ಶುಚಿತ್ವ, ನೊಂದಣಿ/ಪರವಾನಗಿ ಪಡೆದುಕೊಳ್ಳುವಿಕೆ ಇತ್ಯಾದಿಗಳ ಬಗ್ಗೆ ಮಾಹಿತಿ ನೀಡಿ ಅರಿವು ಮೂಡಿಸಲಾಗುತ್ತಿವೆ. ಅಲ್ಲದೇ ಸದರಿ ಘಟಕಗಳಿಗೆ ಪರಿಶೀಲನಾ ಭೇಟಿ ನೀಡಿ ಬೆಲ್ಲದ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಿ ತಪ್ಪಿತಸ್ಥರ ವಿರುದ್ಧ ಕಾಯ್ದೆಯ ಅನ್ವಯ ಕ್ರಮ ಜರುಗಿಸಲಾಗುತ್ತಿದೆ.

- ಮಂಡ್ಯ ಜಿಲ್ಲೆಯಲ್ಲಿ 60ಕ್ಕೂ ಹೆಚ್ಚು ಬೆಲ್ಲ ತಯಾರಿಕ ಘಟಕಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಸುಮಾರು 24 ಬೆಲ್ಲದ ಆಹಾರ ಮಾದರಿಗಳನ್ನು ಸಂಗ್ರಹಿಸಿ ಆಹಾರ ಪ್ರಯೋಗಾಲಯಕ್ಕೆ ಗುಣ ವಿಶ್ಲೇಷಣೆಗೆ ಒಳಪಡಿಸಿದ್ದು 3 ಬೆಲ್ಲದ ಮಾದರಿಗಳು **Sub-standard** ಎಂದು ವಿಶ್ಲೇಷಣಾ ವರದಿ ಬಂದಿದ್ದು FSSAI ಕಾಯ್ದೆ 2006 ಸೆಕ್ಷನ್ 51 ರ ಅಡಿ ಪ್ರಕರಣವನ್ನು ನ್ಯಾಯಾಲಯದಲ್ಲಿ ದಾಖಲಿಸಲಾಗಿದೆ ಹಾಗೂ 5,000 ರೂಪಾಯಿ ದಂಡ ವಿಧಿಸಲಾಗಿದೆ.
- ಬಳ್ಳಾರಿ ಜಿಲ್ಲೆಯಲ್ಲಿ ಬೆಲ್ಲ ತಯಾರಿಕ ಘಟಕಗಳಿಗೆ ಅನಿರೀಕ್ಷಿತ ಭೇಟಿ ನೀಡಿ 15 ಬೆಲ್ಲದ ಆಹಾರ ಮಾದರಿಗಳನ್ನು ಸಂಗ್ರಹಿಸಿ ಆಹಾರ ಪ್ರಯೋಗಾಲಯಕ್ಕೆ ಗುಣ ವಿಶ್ಲೇಷಣೆಗೆ ಒಳಪಡಿಸಿದ್ದು 2 **unsafe**, 1 **Sub-standard** ಎಂದು ವಿಶ್ಲೇಷಣಾ ವರದಿ ಬಂದಿದ್ದು FSSAI ಕಾಯ್ದೆ 2006 ಸೆಕ್ಷನ್ 51 ರ ಅಡಿ ಪ್ರಕರಣವನ್ನು ನ್ಯಾಯಾಲಯದಲ್ಲಿ ದಾಖಲಿಸಲಾಗಿದೆ ಹಾಗೂ ರೂ.18,000 ದಂಡ ವಿಧಿಸಲಾಗಿದೆ.
- ಬೆಳಗಾವಿ ಜಿಲ್ಲೆಯಲ್ಲಿ 44 ಬೆಲ್ಲ ತಯಾರಿಕ ಘಟಕಗಳಿಗೆ ಅನಿರೀಕ್ಷಿತ ಭೇಟಿ ನೀಡಿ 5 ಕಾನೂನಾತ್ಮಕ ಬೆಲ್ಲದ ಆಹಾರ ಮಾದರಿಗಳನ್ನು ಸಂಗ್ರಹಿಸಿ ಆಹಾರ ಪ್ರಯೋಗಾಲಯಕ್ಕೆ ಗುಣ ವಿಶ್ಲೇಷಣೆಗೆ ಒಳಪಡಿಸಿದಾಗ 5 ಬೆಲ್ಲದ ಮಾದರಿಗಳು ಸುರಕ್ಷಿತ ಎಂದು ವಿಶ್ಲೇಷಣಾ ವರದಿ ಬಂದಿದ್ದು, ಬಿಜಾಪುರ ಜಿಲ್ಲೆಯಲ್ಲಿ 2 ಬೆಲ್ಲ ತಯಾರಿಕ ಘಟಕಗಳಿಗೆ ಅನಿರೀಕ್ಷಿತ ಭೇಟಿ ನೀಡಿ 3 ಬೆಲ್ಲದ ಮಾದರಿಗಳನ್ನು ಸಂಗ್ರಹಿಸಿ ಆಹಾರ ಪ್ರಯೋಗಾಲಯಕ್ಕೆ ಗುಣ ವಿಶ್ಲೇಷಣೆಗೆ ಒಳಪಡಿಸಿದಾಗ 3 ಬೆಲ್ಲದ ಮಾದರಿಗಳು ಸುರಕ್ಷಿತ ಎಂದು ವಿಶ್ಲೇಷಣಾ ವರದಿ ಬಂದಿರುತ್ತದೆ. ಬಾಗಲಕೋಟೆ ಜಿಲ್ಲೆಯಲ್ಲಿ ಬೆಲ್ಲ ತಯಾರಿಕ ಘಟಕಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಬೆಲ್ಲ ತಯಾರಿಕ ಘಟಕಗಳಿಗೆ ಭೇಟಿ ನೀಡಿ ಅರಿವು ಮೂಡಿಸಲಾಗಿರುತ್ತದೆ.

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ADC

# ADC details from april 2017 to Nov- 2021

| Sl.No | Distict | No. of cases filed in ADC court | Decided | Pending cases | Penalty in Rupees |
|---|---|---|---|---|---|
| 1 | Bagalkot | 65 | 64 | 1 | 183400 |
| 2 | Bengaluru Urban | 2 | 0 | 2 | 0 |
| 3 | Bengaluru Rural | 4 | 0 | 4 | 0 |
| 4 | Belagavi | 13 | 0 | 13 | 0 |
| 5 | Bellary | 25 | 21 | 4 | 440250 |
| 6 | Bidar | 164 | 142 | 22 | 420800 |
| 7 | Vijayapura | 11 | 11 | 0 | 115000 |
| 8 | Chamarajanagar | 9 | 9 | 0 | 70000 |
| 9 | Chikkaballapura | 35 | 34 | 1 | 177000 |
| 10 | Chikkamagaluru | 27 | 5 | 22 | 300000 |
| 11 | Chitradurga | 47 | 45 | 2 | 117000 |
| 12 | Dakshina Kannada | 1 | 0 | 1 | 0 |
| 13 | Davanagere | 27 | 22 | 5 | 212000 |
| 14 | Dharwad | 52 | 38 | 14 | 499000 |
| 15 | Gadag | 14 | 9 | 5 | 185000 |
| 16 | Kalaburgi | 37 | 15 | 22 | 153000 |
| 17 | Hassan | 7 | 4 | 3 | 50000 |
| 18 | Haveri | 24 | 24 | 0 | 150000 |
| 19 | Kodagu | 0 | 0 | 0 | 0 |
| 20 | Kolar | 10 | 0 | 10 | 0 |
| 21 | Koppala | 14 | 0 | 14 | 0 |
| 22 | Mandya | 4 | 0 | 4 | 0 |
| 23 | Mysuru | 4 | 0 | 4 | 0 |
| 24 | Raichur | 55 | 43 | 12 | 12000 |
| 25 | Ramangara | 15 | 11 | 4 | 0 |
| 26 | Shimoga | 17 | 11 | 6 | 95000 |
| 27 | Tumkur | 35 | 6 | 29 | 109500 |
| 28 | Udupi | 8 | 8 | 0 | 35000 |
| 29 | Uttara Kannada | 7 | 4 | 3 | 18000 |
| 30 | Yadagiri | 57 | 43 | 14 | 241000 |
| 31 | B.B.M.P East | 10 | - | 10 | 0 |
| 32 | B.B.M.P South | 0 | 0 | 0 | 0 |
| 33 | B.B.M.P North | 6 | 0 | 6 | 0 |
| 34 | B.B.M.P West | 4 | 0 | 4 | 0 |
| 35 | Mysuru City | 4 | 0 | 4 | 0 |
| 36 | HDMC | 25 | 24 | 1 | 143000 |
| | Total | 839 | 593 | 246 | 3725950 |

ಜಂಟಿ ಆಯುಕ್ತರು
ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ
ಬೆಂಗಳೂರು

(ಅನುಬಂಧ-1)

## ರಾಜ್ಯದಲ್ಲಿ JMFC ಹಾಗೂ ADC ನ್ಯಾಯಾಲಯದಲ್ಲಿ ಎಫ್.ಎಸ್.ಎಸ್.ಎ ಕಾಯ್ದೆಯಡಿ ದಾಖಲಿಸಲಾದ ಪ್ರಕರಣಗಳ ವಿವರಗಳು

### JMFC details from april 2017 to Nov- 2021

| Sl.No | Distict | No. of cases filed in JMFC court | Decided | Pending cases | Penalty in Rupees | Conviction |
|---|---|---|---|---|---|---|
| 1 | Bagalkot | 0 | 0 | 0 | 0 | 0 |
| 2 | Bengaluru Urban | 5 | 0 | 5 | 0 | 0 |
| 3 | Bengaluru Rural | 2 | 0 | 2 | 0 | 0 |
| 4 | Belagavi | 13 | 0 | 13 | 0 | 0 |
| 5 | Bellary | 5 | 0 | 5 | 0 | 0 |
| 6 | Bidar | 16 | 0 | 16 | 0 | 0 |
| 7 | Vijayapura | 9 | 0 | 9 | 0 | 0 |
| 8 | Chamarajanagar | 0 | 0 | 0 | 0 | 0 |
| 9 | Chikkaballapura | 5 | 1 | 1 | 10000 | 0 |
| 10 | Chikkamagaluru | 2 | 0 | 2 | 0 | 0 |
| 11 | Chitradurga | 6 | 0 | 6 | 0 | |
| 12 | Dakshina Kannada | 0 | 0 | 0 | 0 | 0 |
| 13 | Davanagere | 9 | 1 | 8 | 0 | 0 |
| 14 | Dharwad | 22 | 0 | 22 | 0 | 0 |
| 15 | Gadag | 4 | 2 | 2 | 25000 | 0 |
| 16 | Kalaburgi | 2 | 0 | 2 | 0 | 0 |
| 17 | Hassan | 5 | 0 | 5 | 0 | 0 |
| 18 | Haveri | 4 | 0 | 4 | 0 | 0 |
| 19 | Kodagu | 0 | 0 | 0 | 0 | 0 |
| 20 | Kolar | 6 | 3 | 3 | 75000 | Imprisonment |
| 21 | Koppala | 1 | 0 | 1 | 0 | 0 |
| 22 | Mandya | 0 | 0 | 0 | 0 | 0 |
| 23 | Mysuru | 3 | 0 | 3 | 0 | 0 |
| 24 | Raichur | 2 | 0 | 2 | 0 | 0 |
| 25 | Ramangara | 25 | 3 | 22 | 20000 | 0 |
| 26 | Shimoga | 0 | 0 | 0 | 0 | 0 |
| 27 | Tumkur | 13 | 1 | 12 | 25000 | 0 |
| 28 | Udupi | 1 | 0 | 1 | 0 | 0 |
| 29 | Uttara Kannada | 5 | 0 | 5 | 0 | 0 |
| 30 | Yadagiri | 1 | 0 | 0 | 0 | 0 |
| 31 | B.B.M.P East | 3 | | 3 | 0 | 0 |
| 32 | B.B.M.P South | 4 | 1 | 3 | 0 | 0 |
| 33 | B.B.M.P North | 3 | 1 | 2 | 0 | 0 |
| 34 | B.B.M.P West | 4 | 2 | 0 | 0 | 0 |
| 35 | Mysuru City | 0 | 0 | 0 | 0 | 0 |
| 36 | HDMC | 13 | 0 | 13 | 0 | 0 |
| | Total | 193 | 15 | 172 | 155000 | 0 |